ವಾರದ ಸಂಚಿಕೆ
Reg No. M 129
Daily & Weekly
For All Kinds of Printing & Binding
The Satyavadi Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 320 | ಶನಿವಾರ 26—6—1943 | 6 ಪೈ

ಡೆಬ್ಯೂ. ಆರ್. ಜಿ. ಸಿ. ಯುವರ
ಶ್ರೀ ಮಿಕರ್
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಒರತಿಸಿ

ಬಾಂಬು ಧಾಳಿಯಿಂದ ಪ್ರಯೋಜನವೇ ?

ಮುಕ್ಕುಸಕ್ಷದವರು ಪಶ್ಚಿಮ ಯೂರೋಪಿನಲ್ಲಿ ಈ ವರ್ಷ 6೫ ಬಾಂಬರ್ ವಿಮಾನಗಳನ್ನು ಕಳೆದುಕೊಂಡರು. ಇದರಿಂದ ವಿಮಾನ ಧಾಳಿಯಿಂದ ಏನು ಪ್ರಯೋಜನವೆನ್ನಬಹುದು ನಿಜ. ಇಷ್ಟೂ ಮುಕ್ಕುಸಕ್ಷದವರಿಗೆ ನಷ್ಟವಾಯಿತು. ಅಂದರೆ ತಾವು ಕಳುಹಿಸಿದ ವಿಮಾನಗಳಲ್ಲಿ ಸೂರಕ್ಕೆ 10 ರಂತೆ ವಾಪಸು ಒರುವುದಿಲ್ಲವೆಂದು ಗೊತ್ತಿದೆ ಜರ್ಮನಿಯವರು ಹಿಂದೆ ಇಂಗ್ಲೆಂಡಿನೆಲೆ ಧಾಳಿಮಾಡಿದಾಗ ಇನ್ನೂ ಹೆಚ್ಚಾಗಿ ವಿಮಾನಗಳು ನಾಶವಾದ್ದರಿಂದ ಗೋರಿಂಗ್ ಈಗ ಇಂಗ್ಲೆಂಡಿನೆಲೆ ಹೆಚ್ಚಾಗಿ ಧಾಳಿಮಾಡಲು ವಿಮಾನಗಳನ್ನು ಕಳಿಸಿಲ್ಲ. ಬ್ರಿಟಿಷರು ಜರ್ಮನಿಯಮೇಲೆ ಧಾಳಿ ಮಾಡುತ್ತಿರುವುದರಿಂದ ಬ್ರಿಟಿಷರವರಿಗೆ ಆಗುವ ಪ್ರಯೋಜನಗಳು ಯಾವುವೆಂದರೆ—1. ಜರ್ಮನಿಯವರ ತಮ್ಮಲ್ಲಿರುವ ವಿಮಾನಗಳಲ್ಲಿ 5 ರಲ್ಲಿ 4 ವಾಲು ಪಶ್ಚಿಮ ರಣರಂಗದಲ್ಲಿ ಉಪಯೋಗಿಸುತ್ತಿರುವುದು. 2. ಫ್ರಾನ್ಸ್ ಕಾವಲಿಗೆ ಅನೇಕ ವಿಮಾನಗಳು ಅಲ್ಲಿರುವುವು. 3. ಟ್ಯುನಿಷಿಯಾದಲ್ಲಿ ಜರ್ಮನಿಯ ಅಪಜಯಕ್ಕೆ ವಿಮಾನ ಅಲ್ಪರೀತಿಯಲ್ಲಿ ಕಳಿಸಲ್ಪಟ್ಟವು. 4. ಕೇಂದ್ರ ಸ್ಥಳಗಳನ್ನು ನಾಶಮಾಡುವುದರಿಂದ ವಿಮಾನ ತಯಾರು ಮಾಡುವುದಕ್ಕೆ ಅಡ್ಡಿಮಾಡುವುದು

ವಿಮಾನ ಧಾಳಿಯಿಂದಲೇ ಯುದ್ಧಗೆಲ್ಲಲು ಆಗುವುದಿಲ್ಲ. ಧಾಳಿಯನ್ನು ಎಡಬಿಡದೆ ದೊಡ್ಡ ಸಂಖ್ಯೆಯಲ್ಲಿ ಭಾರಿ ಬಾಂಬುಗಳನ್ನು ಹಾಕತ್ತಿರಬೇಕು. ಹೀಗೆ ಮಾಡುವುದರಿಂದ ಶತ್ರುಗಳು ಯುದ್ಧೋಪಯೋಗಿ ಸಾಮಗ್ರಿಯನ್ನು ತಯಾರುಮಾಡಿಕೊಳ್ಳಲು ಅನಾನುಕೂಲವಾಗುವುದು. ಒಂದುಸಲ ಶತ್ರುವನ್ನು ಓಡಿಸಿದರೆ ಪುನಹ ಅವರು ಮುತ್ತುವಂತೆ ಆಗುವುದಿಲ್ಲ. ಕಲೋನ್ ಮೇಲೆ 1942ನೇ ಮೇ ಏಳನೆ ತಾರೀಖಿನಲ್ಲಿ ಒಟ್ಟಾವ ಧಾಳಿ ಮಿತ್ರರು ಮಾಡಿದ್ದರಿಂದ ಅಲ್ಲಿದ್ದ ಯುದ್ಧಸಾಮಗ್ರಿ ತಯಾರುಮಾಡುವ ಕಾರ್ಖಾನೆಗಳು ನಾಶವಾಗಿ ಅಲ್ಲಿಯ ಸ್ಥಿತಿಯೇ ಬದಲಾಯಿಸಿತು. ಏಕಕಾಲದಲ್ಲಿ ಇಷ್ಟು ವಿಮಾನಗಳು ಕಾಣಿಸಿದ್ದನ್ನೆ ಅಲ್ಲಿ ಸುಮ್ಮೆಯಾಲ್ಲಿ ಒಂದು ಸಾವಿರವೃತ್ತಿ ಕಳಿಸಿದರೂ ಅದರಿಂದ ಇಷ್ಟು ಪ್ರಯೋಜನವಾಗುತ್ತಿರಲಿಲ್ಲ. ಶತ್ರುಗಳು ಜೀತರಿಸಿಕೊಳ್ಳದ ಹಾಗೆ ಹೆಚ್ಚು ವಿಮಾನ ಕಳಿಸಬೇಕು ಅದೂ ವೇಲಿಂದ ವೇಲೆ ಆಗ ವಿಮಾನಧಾಳಿ ಪ್ರಯೋಜನ ಕಾಣುವುದು. ಮೇ ತಿಂಗಳಲ್ಲಿ ಡೆರ್ಮುನುಂಡ್ ಶೀಲೆ ಧಾಳಿಯಾಯಿತು. ಒಂದುಸಲ ಧಾಳಿ ಎಂಬುವಿನು ಭಯ ಲಂಡನ್‌ನಲ್ಲಿರುವವರಿಗೆ ಗೊತ್ತು. ಈಚೆಗೆ ಜರ್ಮನಿಯ ಫೊಹಸಿ ಅಣೆಕಟ್ಟು ಒಡೆದಿದ್ದರಿಂದ ಊರಿಗೆ ಊರೇ ಅಳಿದುಹೋಯಿತು. ಅಣೆಕಟ್ಟಿನ ನೀರು ಕಮ್ಮಿಯಾಗುತ್ತಿದ್ದ ಹಾಗೆ ಪುನಹ ಬ್ರಿಟಿಷರು ಧಾಳಿಮಾಡಿದರು

2000 ಪೌಂಡು ತೂಕದ ಬಾಂಬುಗಳನ್ನು ಒಂದು ಗಂಟೆ ಕಾಲದಲ್ಲಿ ಸುರಿಮಳೆಗೈದರು. ಈಗ ನಷ್ಟವನ್ನು ದುರಸ್ತಮಾಡಲು ಹೆಚ್ಚು ಕೂಲಿಗಾರರನ್ನು ನೇಮಿಸಬೇಕಾಯಿತು ಯುದ್ಧೋತ್ಪಮಕ್ಕೆ ಬೇಕಾದ ಸಾಮಗ್ರಿ ಮಾಡಲು ಕೂಲಿಗಾರರ ಅಭಾವದಿಂದ ಕೆಲಸ ಕಮ್ಮಿಯಾಯಿತು. ಆಲ್ಲದೆ ಇಲ್ಲಿಗೆ ಸಮೀಪವಲ್ಲಿರುವ ಡೂಸಲ್‌ಡ್ಯಾಫ್‌ವೇಲೆ ಇದೇ ಕಾಲದಲ್ಲಿ ಧಾಳಿ ನಡೆದು, ಈ ಗಾಯವನ್ನು ವಟ್ಟ ವಟ್ಟ ನೋಡಿಕೊಳ್ಳುತ್ತಿದೆ. ಇಲ್ಲಿನ ಪ್ರಜೆಗಳು ವಿಮಾನಕ್ಕೆ ಓಡಿದರು. ಕಾರ್ಖಾನೆಗಳನ್ನು ಭೂಮಿಯೊಳಗೆ ನಡೆಸಲು ಆಗುವುದಿಲ್ಲ. ಸ್ಟೀಲ್ ಮುಖ್ಯವಾದ ಪದಾರ್ಥ, ಇದನ್ನು ಕರಗಿಸಿ ಎರಕ ಹೊಯ್ಯಲು ಭಾರಿ ತೂಕವುಳ್ಳ ಯಂತ್ರಗಳು ಭೂಮಿಯ ಮೆಲುಬಾಗಡೆ ಇರಬೇಕು, ಮೊಷೆನಿ. ಈಡಾ ಈ ಎರಡು ಅಣೆಕಟ್ಟು ನಾಶವಾದ್ದರಿಂದ ಏನಾಯಿತೆನ್ನಬಹುದು ಹಾಗಲ್ಲ, ಇವನ್ನು ರಿಪೇರಿ ಮಾಡಲು ಕಾರ್ಖಾನೆಗಳಲ್ಲಿದ್ದ ಕೂಲಿಗಳನ್ನು ಕರೆಸಬೇಕಾಯಿತು. ನೀರಿಲ್ಲದೆ ವಿದ್ಯುತ್ ಕಾರ್ಖಾನೆ ಕೆಲಸ ಮಾಡಲಿಲ್ಲ.

ಒಂದು ಸ್ಥಳದಲ್ಲಿ ಎರಡು ಟನ್ ಸಿಡಿಮದ್ದಿನ ಬಾಂಬು (ಅಂದರೆ 4000 ಪೌಂಡು) ಬಿದ್ದಾಗ ಆ ಸ್ಥಳವು ವಿನಾಗುವುದೆಂದು ಯೋಚಿಸೋಣ. ಬೊಂಬಾಯಿ ಕಲ್ಕತ್ತಾದಲ್ಲಿರುವವನಿಗೆ ನಾವು ಹೇಳಬೇಕಾಗಿಲ್ಲ. ಅದರೆ ಬೆಂಗಳೂರು ಚಿಕ್ಕಪೇಟೆಯಲ್ಲಿ ಸಾಯಂಕಾಲದಲ್ಲಿ ಇಂಥಾ ಒಂದು ಬಾಂಬು ಬಿದ್ದರೆ (ದೇವರ ದಯೆಯಿಂದ ಬೇಡ) ಆಗ ಅಲ್ಲಿನ ಸ್ಥಿತಿ ಹೇಗಿರುವುದೆಂದು ನೀವು ಊಹಿಸಿಕೊಳ್ಳಿ. ಇದರಂತೆ ಅಲ್ಲವೆ ಅಲ್ಲಿಯೂ ಡಾಟ್ ಪೆಂಟ್, ಡೂಸಲ್‌ಡ್ಯಾಫ್ ಇವೂ ವಿಶಾಲ ನಗರಗಳೆನ್ನಬಹುದು. 20 ಸೆಕೆಂಡಿಗೆ 1 ರಂತೆ 40 ಪೌಂಡು ತೂಕದ ಬಾಂಬುಗಳನ್ನು ಹಾಕಿದರೆ ಅಲ್ಲಿಯವರ ಪಾಡೇನು? ಅನೇಕ ವೇಳೆ 8 ಸಾವಿರ ಪೌಂಡು ಬಾಂಬ್ ಹಾಕಿದ್ದು ಸಹಾ ಉಂಟು. ಇಂಥ ಬಿದ್ದರಿಸಗರವು ಉಳಿಯುವುದೇ? ನಕಾಸಲ್ಲಿ ನಗರದ ಗರ್ತೇ ಇಲ್ಲದಂತೆ ಮಾಡುವುವು. ಈ 4000 ಪೌಂಡು ಬಾಂಬು ಬಿದ್ದ ಸ್ಥಳದಲ್ಲಿ ಭೂಕಂಪವಾಗದ್ದರೂ ಅಷ್ಟು ನಷ್ಟವಾಗುವುದಿಲ್ಲ. ಭೂಕಂಪವಾದ ಕಡೆಗಳಲ್ಲಿ ಆಳದು ಉಳಿದ ಯಂತ್ರಗಳನ್ನು ಸರಿಮಾಡಬಹುದು, ಕೆಲಸಕ್ಕೆ ಸ್ವಾತಂತ್ರಮಾಡಬಹುದು; ಬಾಂಬು ಬಿದ್ದ ಕಡೆಗಳಲ್ಲಿ ಏನೂ ಮಾಡಲು ಆಗುವುದಿಲ್ಲ !

ಕಂಪಾಜಿಟರು ಬೇಕಾಗಿದೆ

ಪೂರ್ತಿ ಯೊತ್ತಾಗಲೀ, ಮಧ್ಯಾಹ್ನ ಕೆಲವು ಗಂಟೆಗಳ ಕಾಲವಾಗಲೀ ಕೆಲಸಮಾಡಬಲ್ಲ ಕನ್ನಡ ಕಂಪೋಜಿಂಗನ್ನು ಚೆನ್ನಾಗಿ ಬಲ್ಲ ಒಬ್ಬ ಕಂಪಾಜಿಟರು ಕೂಡಲೇ ಬೇಕಾಗಿದೆ. ವಿವರಗಳನ್ನು ಆಫೀಸಿನಲ್ಲಿ ವಿಚಾರಿಸಬಹುದು.



Screen Play by Jack Jevne & Hugo Butler
Directed by RICHARD THORPE
Produced by MILTON BREN

ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಬಾಂಬಿನ ಹಾವಳಿಯಿಂದ ಪ್ರತಿ ಐದು ಮನೆಗೆ ಒಂದರಂತೆ ಜಖಂ ಹೊಂದಿದೆ ಅವೆಲ್ಲಾ ರಿಪೇರಿ ಮಾಡಲ್ಪಟ್ಟ ವಾಸಾರ್ಹವಾಗಿವೆ.

ಚಕ್ರವರ್ತಿಗಳು ತಮ್ಮ ಉತ್ತರ ಆಫ್ರಿಕಾ ಪ್ರವಾಸ ಮುಗಿಸಿಕೊಂಡು ಬ್ರಿಟನ್ನಿಗೆ ವಾಪಸ್ ಬಂದರು.

ರಷ್ಯಾ ಸೇನೆಗಳೊಡನೆ ಅಮೇರಿಕ ಮತ್ತು ಬ್ರಿಟಿಷ್ ಸೇನೆಗಳು ಸೇರಿಕೊಂಡು ಬಾಲ್ಕನ್‌ನಲ್ಲಿ ಯುದ್ಧಮಾಡಿದಲ್ಲಿ ತನಗೆ ಅಪಜಯವುಂಟಾಗಿದ್ದವೆಂದು ಹಿಟ್ಲರು ಅರಿತು ಗಾಬರಿಗೊಂಡಿದ್ದಾನೆ.

ಮೆಕ್ಸಿಕೋದಲ್ಲಿ ಸಾಕಾದಷ್ಟು ಮಾಂಸ ದೊರೆಯುತ್ತಿಲ್ಲವಾದುದರಿಂದ ಅಲ್ಲಿಯ ಕಟುಕರು ದಂಗೆ ಎದ್ದಿರುವರು.

ಈವಾರದ ಕಥೆ—

ಸ್ವಯಂಕೃತಾಪರಾಧ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದದ್ದು)

ಇಂತಹ ಅವೇಳೆಯಲ್ಲಿ ಏಳ್ದಿರಕ್ಕಿದ್ದೇ ಅಲ್ಲ, ಎಂದು ಹೇಳಿಕೊಂಡು ಪ್ರಯತ್ನಮಾಡಿ ಮೇಲಕ್ಕೆ ಹತ್ತಿ, ತಡವರಿಸುತ್ತಾ ಕೋಟೆಯ ಗೋಡೆಯ ಕೆಳಗೆ ಸಿಕ್ಕಿದ್ದರಿಂದ, ಅಯ್ಯೋ ದಾರಿತಪ್ಪಿತು ಇನ್ನೇನು ಗತಿ ಈ ಕುರುಡನಿಗೆ ಇನ್ನು ಊರಿನ ಮಾರ್ಗ ದೊರೆಯುವುದಂಟೆ ಎಂದು ಮುಂತಾಗಿ ಯೋಚಿಸುತ್ತಿರುವ ಸಮಯಕ್ಕೆ ಕರುಣೀಕ ಭೀಮಣ್ಣನವರು ಯಾರ ಸಂಗಡಲೋ ಘಟ್ಟಿಯಾಗಿ ಮಾತಾಡುತ್ತಿರುವ ಶಬ್ದವು ಕೇಳಿಬಂದಿತು.

ಆಗ ಮೂರ್ತಿಯು ಇನ್ನು ಮೌನವಾಗಿದ್ದರೆ ನಿರ್ವಾಹವಾಗತಕ್ಕದ್ದಿಲ್ಲ [ಅಸತ್ಯಾಲೇ ನಾಸ್ತಿ ಮರ್ಕ್ಯದಾ] ಅವುವಾದರೊಂದು ಉಪಾಯವನೆತ್ತಿ ಈ ವಿಪತ್ತಿನಿಂದ ಪಾರಾಗಬೇಕು. ಯಾವ ಉಪಾಯ (ಎಂದು ಸ್ವಲ್ಪ ಹೊತ್ತು ಯೋಚಿಸಿ) ಸರಿ ಸರಿ ಗೊತ್ತಾಯಿತು, ಈ ಬೆತ್ತದಿಂದ ಕೋಟೆ ಗೋಡೆಯನ್ನು ಬಲವಾಗಿ ಬಡಿಯುತ್ತಾ, ಒಂದು ಒರಡು ಮೂರು ಎಂದು ಘಟ್ಟಿಯಾಗಿ ಹೇಳುತ್ತಿರಬೇಕು. ಈ ಶಬ್ದವು ಸಾಪಸಕಿಗೆ ಜೀಳುತ್ತಲೇ ಯಾರೋ ಮೊಜ್ಜಿನ್ದಾರರು ಕೋಟೆಯ ಗೊಡೆಗಳನ್ನಳಯುವುದಕ್ಕೆ ಬಂದಿರುತ್ತಾರೆ, ಎಂದು ಮೋಸಸರು ನೋಡುವದಕ್ಕೆ ಬರುತ್ತಾರೆ. ಆಗ ಏನಾದರೂ ಉಪಾಯಮಾಡಿ ಅವರ ಜೊತೆಯಲ್ಲಿ ಹೊರಟು ಮನೆಯನ್ನು ಸೇರಿಕೊಳ್ಳಬೇಕು ; ಇದೇ ಸರಿಯಾದ ಉಪಾಯ ಎಂದು ಕೈಲಿದ್ದ ಬೆತ್ತದಿಂದ ಕೋಟೆಯ ಗೋಡೆಯನ್ನು ಹೊಡೆದು ಶಬ್ದಮಾಡುತ್ತಾ, ಒಂದು ಎಂಡು ಮೂರು ಎಂದು ಘಟ್ಟಿಯಾಗಿ ಹೇಳುತ್ತಿದ್ದನು.

ಭೀಮಣ್ಣನು ಇದನ್ನು ಕೇಳಿ ಜೊತೆಯಲ್ಲಿ ಬರುತ್ತಿದ್ದ ಗೌಡನೊಂದಿಗೆ " ಗೌಡ ಇದೇನು ಶಬ್ದ " ಎಂದನು.

ಗೌಡ— ಏಕೆ ಹೇಳುತ್ತೀರಿ, ಹೊಸಮನೆ ಬೋರೇಗೌಡನು ದೆವ್ವವಾಗಿ ಅರಿಚುತ್ತಾನೆ. ಮಾಯಾಗೌಡನ ಅಮ್ಮಕ್ಕನಿಗೆ ಭೀತಿಶಂಕೆಯಾಗಿ ಬದುಕಿದ್ದೇ ಹೆಚ್ಚಾಯಿತು.

ಭೀಮಣ್ಣ— ಇಸ್ಟೇನು ಗತಿಯಿಲ್ಲಾ, ಊರಿಗೆ ದೆವ್ವದ ಕಾಟ ಬಿರೇ ಬಂತೇ (ಎಂದು ಅಲಿಸಿ) ಎಲಾ ಗೌಡಾ, ಇದು ದೆವ್ವದ ಶಬ್ದವಲ್ಲ, ಒಂದು ಎರಡು ಎಂಬುದಾಗಿ ಗೋಡೆ ಅಳೆಯುವ ಶಬ್ದ ; ಮೋಜ್ಜಿನ್ದಾರರು ಬಂದಿರಬೇಕು. ಊರಿಗೆ ಹುದ್ದೇದಾರರು ಬಂದಿರತ್ಕ್ಕ ಸಮಯದಲ್ಲಿ ನಾನು ಊರಿನಲ್ಲಿಲ್ಲದೇ ಹೋದೆನಲ್ಲಾ, ಇನ್ನಾವ ಪುಕಾರು ಬರುತ್ತದೆಯೋ ಎಂದು ಗಾಬರಿಯಿಂದ ಕಂದಕವನ್ನಿಳಿದು, ಅಳಿಯನೆಂಬುದನ್ನು ಗುರ್ತಿಸಿ, ಗೌಡನನ್ನು ಕುರಿತು " ಎಲಾ ಗೌಡಾ ಅಳಿಯಂದರು ಬಂದಿದ್ದಾರಲ್ಲಿ, ಪಡಸಾಲೆಯಲ್ಲಿ ರತ್ನಕಂಬಳಿಯನ್ನು ಹಾಸು, ದೀಪ ಮುಂತಾದ್ದನ್ನು ಸಿದ್ಧಪಡಿಸೆಂದು ಮನೆಯಲ್ಲಿ ತಿಳಿಸು, ಎಂದು ಗೌಡನನ್ನು ಕಳುಹಿಸಿ, ನಾರಾಯಣಮೂರ್ತಿಯ ಸನಿಹಾಕ್ಕೆ ಬಂದು " ಅಳಿಯಂದಿರೇ ! ಮನೆಯಲ್ಲಿ ಶಂಕೂ ಸಂಪಣೆ ಸಿದ್ಧವಾಗಿದೆ. ಕ್ಷಣಮಾತ್ರಕ್ಕೆ ಅಳಿಸಿ ಲೆಕ್ಕವನ್ನು ತಯಾರ್ಮಾಡಿಸುತ್ತೀನಿ, ತವುಗೇತಕ್ಕೆ ಶ್ರಮ, ಒಸ್ಸಿ ಮನೆಗೆ ಹೋಗೋಣ " ಎಂದರು ಭೀಮಣ್ಣನವರು.

ಮೂರ್ತಿ— ಮಾವನವರೇ ! ಸರ್ಕಾರಿ ಕೆಲಸ, ತಟಿಕಟಿಕ್ಕೆ ಒಂದಿಪೆ ಇಸ್ಟೂ ಅಳತೆಯಾಗಿಲ್ಲವೇ ಎಂದು ರಿಸ್ಕೆಂಡರು ಮೇಲೆ ರಿಮೈಂಡರು. ಬೆಳಕು ಹರಿಯುವದರಲ್ಲಿ ಲೆಕ್ಕ ಒಪ್ಪಿಸಬೇಕು, ಊಟಊಪಚಾರಗಳಾವುವೂ ಬೇಕಾಗಿಲ್ಲ ತಾವು ದಯಮಾಡಬಹುದು.

ಭೀಮಣ್ಣ— [ಈ ಮಿಡಿತೋಕ್ತಿಗಳನ್ನು ಕೇಳಿ] ಇದೇನಿದು, ಕಣ್ಣು ಕಾಣದ ಕಾವಳದಲ್ಲಿ ಬೇಕಿನ ಸಹಾಯವಿಲ್ಲದೆ ಲೆಕ್ಕವೆಂದರೇನು ; ಇಲ್ಲಿನ ಹಾವಿನ ಅವತಾರದಲ್ಲಿ, ಈ ಅವೇಳೆಯಲ್ಲಿ, ಮನುಷ್ಯ ಒಡಾಕಿದ್ದುಂಟೆ ಅದರ ಮೇಲಿನ ಕಗಾದೆ ಎಷ್ಟರವಟ್ಟಿಗಿದೆಯೋ, ಮೊಜಣಿ ಕೆಲಸ ಹೊಸದಾಗಿ ಆಗಿರಬೇಕು, ಆದ್ದರಿಂದಲೇ ಇಷ್ಟು ಗಾಬರಿ ; ಇದ್ದದ್ದರಲ್ಲಿ ಸಮಾಧಾನ ಮಾಡಿ ಕರೆದುಕೊಂಡು ಹೋಗುವುದು ಉತ್ತಮ ಎಂದುಕೊಂಡು, ಅಳಿಯಂದಿರೇ ! ಈ ರಾತ್ರೆಯಲ್ಲೇ ಅಳತೆಯನ್ನು ಪೂರೈಸಿಕೊಡುತ್ತೇನೆ, ಈ ವಿಷಯದಲ್ಲಿ ಯೋಚಿಸಬೇಕಾದ್ದಿಲ್ಲ, ಮನೆಗೆ ಬನ್ನಿ.

ಮೂರ್ತಿ— ಮಾವನ ಸಹಾಯ ದೊರಕಿದಂತಾಯಿತು ; ಆದರೆ ಮಾವನು ಹೇಗಿದ್ದಾನೋ ಎತ್ತ ಎಲ್ಲಿದ್ದಾನೋ ಎನ್ನುವದೇ ನನಗೆ ಕಾಣವಹುದಿಲ್ಲ. ಇವನ ಜೊತೆಯಲ್ಲಿ ನಡೆದು ನಾನು ಮನೆಯನ್ನು ಸೇರಿಕೊಳ್ಳಬೇಕು. ಸ್ವಲ್ಪ ಬಿಗಿಯಾಗಿದ್ದರೆ ಮಾವನೇ ಕೈಹಿಡಿದು ಕರೆದುಕೊಂಡು ಹೋಗಿ ಮನೆಯನ್ನು ಸೇರಿಸುತ್ತಾನೆ ; ಇದೇ ಸರಿಯಾದ ಉಪಾಯ, ಎಂದುಕೊಂಡು, ಮಾವನವರೇ ! ತಲೆಹೋಗುವ ಕೆಲಸ, ಇದರಿಂದ ಮನಸ್ಸಿಗೆ ಯಾವುದೂ ಬೇಕಾಗಿಲ್ಲ ; ತಾವು ದಯಮಾಡಿಸಿ.

ಭೀಮಣ್ಣ— ಒಳ್ಳೇ ಪ್ರಾಣಕ್ಕೆ ಒಂದಿತಲ್ಲಾ, ಈಗ ಬಿಟ್ಟರೆ ಅಪಾಯವಾಗುವುದೇನೋ ನಿಜ. ಆದ್ದರಿಂದ ಬಲವಂತವಾಗಿ ಕೈಹಿಡಿದು ಕರೆದುಕೊಂಡು ಹೋಗಲೇಬೇಕು. ಈ ಭ್ರಾಂತಿಯು ತಪ್ಪತಕ್ಕದ್ದಲ್ಲ, ಎಂದಂದುಕೊಂಡು, ಭೀಮಣ್ಣನು ಮೂರ್ತಿಯ ಕೈ ಹಿಡಿದುಕೊಂಡು ಹೊರಡಲುದ್ಯುಕ್ತನಾದನು.

(ಮುಂದುವರಿಯುವುದು.)

ಟ್ರುಕ್‌ದ್ವೀಪದ ಮಹತ್ವ.

ಗ್ವಾಡಲ್‌ಕೆನಲ್‌ನಿಂದ ಟೋಕಿಯೋಗೆ ಒಂದು ನೇರವಾದ ಗೆರೆ ಎಳೆದರೆ ಈ ಟ್ರುಕ್ ಒಂದು ಸಣ್ಣ ದ್ವೀಪವಿದೆ. ಇದರ ಹೆಸರು ಟ್ರುಕ್, ಇದು ಟೋಕಿಯೋನಿಂದ 1300 ಮೈಲಿ ದೂರದಲ್ಲಿ ಅಂದರೆ ಸಾಲೋಮನ್ಸ್‌ನಿಂದ 1300 ಮೈಲಿ ದೂರದಲ್ಲಿದೆ. ಈ ದ್ವೀಪದಲ್ಲಿ ಬಹಳ ಪರ್ವತಗಳಾದ ಯಾವ ಬೆಳೆ ಮನುಷ್ಯ ಸನ್ನೂ ಕಾಣಿಸಲು ಬಿಡಲಿಲ್ಲ. ಈ ದ್ವೀಪದ ವಿಷಯದಲ್ಲಿ ಜಪಾನಿಯರು ತಮ್ಮ ಶಕ್ತಿಯನ್ನು ಹೆಚ್ಚಾಗಿ ತೋರಿಸಿರುವರು. ಪೆರಲ್‌ಹಾರ್ಬರ್‌ಗೆ ಸಮನಾದಂಥಾ ಒಂದು ಬಂದರನ್ನು ಕಟ್ಟಿರುತ್ತಾರೆ. ಅಮೇರಿಕಾದ ಪೆರಲ್‌ಹಾರ್ಬರ್‌ನ್ನು ಯಾರಾದರೂ ನೋಡಬಹುದು. ಈ ಟ್ರುಕ್‌ದ್ವೀಪದ ವಿಷಯ ಯಾರಿಗೂ ತಿಳಿಯದು. ಬಹಳ ರಹಸ್ಯವಾಗಿ ಜಪಾನಿಯರು ಈ ದ್ವೀಪದಲ್ಲಿ ಒಂದನ್ನು ನಿರ್ಮಾಣಮಾಡಿದರು. ಸಾಮಾನುಗಳು ವೈಲಿ ದೂರದಿಂದ ಅಂದರೆ ಟೋಕಿಯೋದಿಂದ ಸಾಲು ಸಾಲಾಗಿ ಹಡಗುಗಳಲ್ಲಿ ಗುಂಡು ಮುಂತಾದ ಸಾಮಾನುಗಳನ್ನು ತಂದರು. ಇದು ಹಿಂದೆ ಜರ್ಮನಿಗೆ ಸೇರಿದ್ದು, 1914 ನೇ ಯುದ್ಧದಲ್ಲಿ ಇವರ ಪಾಲಿಗೆ ಬಂತು ಇಲ್ಲಿ ಕೋಟೆ, ಕೊತ್ತಲುಗಳನ್ನು ಕಟ್ಟಬಾರದೆಂದು ಒಪ್ಪಂದವಿದ್ದರೂ ಇದನ್ನು ಗಮನಿಸಲಿಲ್ಲ ಈಗ ತಲ್ಲಿ ತಮ್ಮ ಎಲ್ಲಾ ನೌಕೆಗಳನ್ನು ಒಟ್ಟುಗೂಡಿಸಿ ನಿಲ್ಲಾಣಮಾಡುವಷ್ಟು ಅನುಕೂಲವಾಗಿರುತ್ತಾರೆ. ಹಡಗುಗಳು ತಂಗಲು ಭಾರಿ ನಿಲ್ದಾಣಗಳಿವೆ. ದೊಡ್ಡ ದೊಡ್ಡ ವಿಮಾನಗಳ ನಿಲ್ದಾಣಗಳಿವೆ. ಅಲ್ಲಿ 14 ಇಂಚು 16 ಇಂಚು ಗುಂಡುಗಳನ್ನು ಸಿಡಿಸುತ್ತಾರೆ ಇವುಗಳಿಂದ ಹೆಲ್ಲುಗಳನ್ನು 25 ಮೈಲಿ ದೂರ ಕಾರಬಹುದು. ಒಂದು ಸಬ್‌ಮೆರಿನ್ ನಿಲ್ದಾಣವಲ್ಲದೆ ಹಡಗುಗಳ ರಿಪೇರಿಮಾಡಿಸುವ ಎಂಡು ಭಾರಿ ಡಾ 1300 ಮೈಲಿ ದೂರದಲ್ಲಿವೆ ಇಷ್ಟುದೂರ ಕಾಗಳಿವೆ ಈ ಕಾಲದಲ್ಲಿ ಬ್ರಿಟಿಷರು ದಿಂದ ವಿಮಾನಧಾಳಿ ಮಾಡುವುದು ಕಷ್ಟ

ಲೇಡಿ ಕರ್ಜನ್ನರ ಮಿಸ್ಸೋಮಾಷ್ಯೆ

1898 ರಿಂದ 1905 ರವರೆಗೆ ಹಿಂದೂ ದೇಶದ ಗೌರ್ನರ್ ಜನರಲ್ಲಾಗಿದ್ದ ಬಂಗಾಳ ರಾಷ್ಟ್ರವನ್ನು ವಿಭಜನೆ ಮಾಡಿ ಮರದೇನೂತರಾ ಉಪದ್ರವಕ್ಕೆ ಕಾರಣರಾದ ಕರ್ಜನ್ನರವರು ಬಹಳ ಬುದ್ಧಿವಂತರು, ನಿರಂಕುಶರು. ಇವರ ಪತ್ನಿಯವರೋ ಬಹಳ ದಯಾಹೃದಯಳು. ಆಕೆಯು ದಾನಧರ್ಮಗಳನ್ನು ಮಾಡಿ ಪ್ರಜೆಗಳ ಅನುರಾಗಕ್ಕೆ ಪಾತ್ರಳಾದಳು. ಆಕೆಗೆ ಅಸ್ವಸ್ಥವಾದಾಗ ಅನೇಕ ದೇವಾಲಯಗಳಲ್ಲಿಯೂ ಮಸೀದಿಗಳಲ್ಲಿಯೂ ಆಕೆಗೆ ಆರೋಗ್ಯವಾಗಲೆಂದು ಪ್ರಾರ್ಥನೆಗಳು ನಡೆದವು

ತನ್ನ ಪತಿಯು ಅನೇಕಾನೇಕ ರಾಜರ ಮನಸ್ಸುಗಳಿಗೆ ಬಾಧೆಯನ್ನುಂಟು ಮಾಡುತ್ತಾ ಅತಿ ವೈಭವದೊಡನೆ ದೆಲ್ಲಿ ದರ್ಬಾರನ್ನು ನಡೆಸುತ್ತಿದ್ದುದಕ್ಕೆ ಆಕೆಯು ಬಾಧೆಪಡುತ್ತಾ, ಆದು ನಡೆಯುತ್ತಿದ್ದ ಕಾಲವಲೆಲ್ಲಾ ಪ್ರತಿ ರಾತ್ರಿಯೂ ಬಹಳ ಮುಖಮಸಡುತ್ತಿದ್ದಳಂತೆ. ತನ್ನ ಪತಿಯು ಪ್ರಜೆಗಳ ಅನುರಾಗಕ್ಕೆ ಪಾತ್ರನಾಗದಿರುವಿಕೆಯು ಕೂಡ ಆಕೆಯ ಮನೋವ್ಯಥೆಗೆ ಕಾರಣವಾಗಿತ್ತಂತೆ ಈ ಮನೋವ್ಯಥೆಯೇ ಈಕೆಯ ಅಕಾಲ ಮರಣಕ್ಕೆ ಕಾರಣವಾಯಿತಂತೆ,— ಹೀಗೆಂದು ಜಾರ್ಜ್ ಲಾ ಎಂಬುವನು 1908 ರಲ್ಲಿ ಬರೆದಿರುವನು.

(ಓಂ)



ಲುಲಾಜಾಕಿನ ಒಂದು ನೃತ್ಯ.

ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ

ಚಂದಾದರ

ಮೈಸೂರು ದೈನ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲಗು.

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿನ ವಾರ್ಷಿಕ ಚಂದಾ ರೂ. 3-0-0

ಇದಕ್ಕೆ ಪ್ರತಿ 4 ಆಣೆ.

ಹೊಸ ವಾರ್ಷಿಕ ಚಂದಾದಾರರಿಗೆ ಮೊದಲ ಸಂಚಿಕೆಯಿಂದ ಕೊಡಲಾಗುವುದು.

ಕಾರ್ಯಾಲಯ :

ಶಿವವಿಲಾಸ ಬಿಲ್ಡಿಂಗ್ಸ್

ಅಶೋಕ ರಸ್ತೆ — ಮೈಸೂರು

Coming shortly at OPERA

ಉಲ್ ಜಾಕ್

ತಾರಾಗಣ —

ಸರ್ದಾರ್ ಅಖ್ತಾರ್

ಮಜರ್ ಖಾನ್

ಕೃಷ್ಣಕಾಂತ

ಅಕ್ಕರ

ಸಾಮಾಜಿಕ

ಭಾವಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಯವರೆಗೂ ಉಳಿಸಿಕ್ಕೆ ಕೊಡದು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ ಪೋಸ್ಟೇಜ್ 1 ಆಣೆ. ಸಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಲೇಗ್ ಆಫ್ ನೇಷನ್ಸ್ ಯೂನಿಯನ್ ಸ್ವಿಗೆ ಮಿ|| ಚರ್ಚಿಲ್‌ರು ಪುನಃ ಗೌರವ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ

o o

ನಾಗಪುರದ ಸೈನ್ಸ್ ಕಾಲೇಜಿನಲ್ಲಿ ದಿನ 22 ನೇ ತಾರೀಖಿನಂದು ಪದವೀಧರರಿಗೆ ಈ ತಿಂಗಳು 24 ರಲ್ಲಿ ಸಿಹಿ ಊಟವನ್ನು ಏರ್ಪಡಿಸಿದ್ದರು. ಮಧ್ಯಾಹ್ನದ ಗಾರ್ಡರರು ಅಧ್ಯಕ್ಷತೆಯನ್ನು ವಹಿಸಿದ್ದರು. ಸರ್ ವಿಲಿಯಂ ಇ

o o

ಮಿಲ್ಕ್‌ಮಂಡಲಿಯವರು ದಕ್ಷಿಣ ಬಂಗಾಳದ ಮೇಲೆ ಧಾರಾ ವಿಮಾನಧಾಳಿ ನಡೆಸಿದರು.

o o

ಲೆಫ್ಟಿನೆಂಟ್ ಜನರಲ್ ಪಾಟಿಯವರು ವಿಮಾನಧಾಳಿ ನಡೆಸಲು ಸ್ಥಾಪಿಸಿದರು ವಿಫಲವಾಯಿತು.

o o

ಸಿಂಧಿನಲ್ಲಿ ಮಿಡತೆಗಳ ಮೇಲೆ ಯುದ್ಧ ಹೂಡಿರುವಂತೆ, ಇಲಿಗಳ ಮೇಲೂ ಯುದ್ಧ ಹೂಡಲಾಗುವುದಂತೆ.

ರಷ್ಯಾ

22-6-43 ಕ್ಕೆ ಜರ್ಮನಿಯು ರಷ್ಯಾ ಸಂಗಡ ಯುದ್ಧ ಹೂಡಿ ಎರಡು ವರ್ಷ ತುಂಬಿ ಮೂರನೇ ವರ್ಷ ಪ್ರಾರಂಭವಾಯಿತು. ಹಿಟ್ಲರು ಮಾಡಿದ ತಪ್ಪು ಇದಲ್ಲ. ತನ್ನ ಪೂರ್ವ ನೆರೆಹೊರೆಯವರ ಸಂಗಡ ದ್ವೇಷ ಕಟ್ಟಿಕೊಳ್ಳಲು ಸ್ಟ್ರಿಕ್ಟ್ ವಿಗ್ರೇಟ್ ಆದಿಯಾಗಿ ಬಿಸ್‌ಮಾರ್ಕ್ ರವರೆಗೆ ಯಾರೂ ಅಪೇಕ್ಷಿಸಲಿಲ್ಲ ಹಿಂದಿನ ಯುದ್ಧದಿಂದ ಇದು ನಮಗೆ ಮುದಟ್ಟಾಗುವುದು.

1918 ರಲ್ಲಿ ರಷ್ಯಾವು ವಿಜಯಪಡೆಯದಿದ್ದುದು ಅದರ ತಪ್ಪಲ್ಲ. ರಷ್ಯಾವು ಎಚ್ಚೆತ್ತುಕೊಳ್ಳುವುದಕ್ಕೆ ಮುಂಚೆಯೇ ರಷ್ಯಾವನ್ನು ಗೆಲ್ಲುವುದಾಗಿ ತಪ್ಪು ತಿಳಿದಿದ್ದನು. ಮಿತ್ರರ ಕಡೆ ಇರುವ ಅನೇಕ ಮಿಲಿಟರಿ ಜ್ಞಾನಿಗಳೂ ಇದೇ ಅಭಿಪ್ರಾಯ ಪಟ್ಟಿದ್ದರು. ಇದು ರಷ್ಯನರಿಗೂ ಗೊತ್ತು.

1942 ರಲ್ಲಿ ಮಿ|| ಸ್ಟಾಲಿನ್‌ರು ಯುದ್ಧ ಕೊನೆಗಾಣಿಸಬೇಕಾದರೆ ಸೈನ್ಯದ ಸತ್ವವಿರಬೇಕು, ಸೇನೆಯುವರು ಎದೆಗೆಡಜಾರದು, ದಂಡನಾಯಕನಿಗೆ ಹೆಚ್ಚಾಗಿ ಸೇನೆಯನ್ನು ಕೊಡಬೇಕು ಅದು ಚೆನ್ನಾಗಿ ತರಬೇತಾದ ಸೇನೆಯಾಗಿರಬೇಕು ಎಂದು ಹೇಳಿದ್ದನು.

ಹಿಟ್ಲರಿಗೆ ಈಗ ರಷ್ಯಾ ಸೇನೆಯ ಮಹತ್ವ ತಿಳಿಯಿತು ಬಾಯಿಬಾಯಿ ಬಿಡುತ್ತಿರುವನು. ಈಗ ರಷ್ಯನರು ಜರ್ಮನರನ್ನು ಮುಂದೆ ಬಿಡದೆ ತಡೆದಿರುವರಲ್ಲದೆ ಜರ್ಮನ್ ಸೇನೆಯ ಒಹು ಭಾಗವನ್ನು ಹೊರಗೆ ಹೋಗದಂತೆ ಸುತ್ತಿಕೊಂಡಿರುವರು. ದೊಡ್ಡ ಕದನವನ್ನು ಹರಡಲು ರಷ್ಯನ್ನರು ಕಾಯುತ್ತಿದ್ದಾರೆ ಈ ಎರಡು ವರ್ಷಗಳಲ್ಲಿ ಜರ್ಮನರ 60 ಲಕ್ಷ ಸೇನೆ ಹತವಾಯಿತು. ಅಷ್ಟೆಂಥ ಸೈನ್ಯವನ್ನು ವಿತರಿಸಲಾಗದಷ್ಟು ನಾಶವಾಯಿತು, ರಷ್ಯನರೂ ನಷ್ಟಪಟ್ಟಿದ್ದಾರೆ. ಆದರೆ ಅವರಿಗೆ ಲಾಭ ಹೆಚ್ಚು. ಹಿಟ್ಲರನು ಹಿಂದೆ ಸ್ಟಾಲಿನ್‌ಗ್ರಾಡ್ ಮತ್ತು ಕಾಕಸಸ್‌ನ್ನು ಹಿಡಿದಿದ್ದರೆ ಮಿತ್ರರಿಗೆ ತುಂಬಾ ನಷ್ಟವಾಗುತ್ತಿತ್ತು. ತುರ್ಕಿಯು ಸುಮ್ಮನಿರಲು ಆಗುತ್ತಿರಲಿಲ್ಲ. ಹಿಟ್ಲರನು ಅಲ್ಲೆಲ್ಲಾ ಸೈನ್ಯವಿಭಾಗಕ್ಕೆ ಬರುವ ಶಕ್ತಿ ಇತ್ತು. ರಷ್ಯಾ ಈ ತೊಂದರೆಯನ್ನೆಲ್ಲಾ ತಪ್ಪಿಸಿದರು. ವಿಶ್ರಾಂತಿಗೆ ಒಂದು ಒಳ್ಳೆಯ ಜಾಗವೆಂದು ಹೇಳಬಹುದು

ಇದುವರೆವಿಗೂ ಮಿತ್ರರು ಹೆಚ್ಚೇನಾಗಿ ಯುದ್ಧೋದ್ಯಮವನ್ನು ಮಾಡಿಕೊಳ್ಳಲು ಸಮಯ ಸಿಕ್ಕಿತು ಶತ್ರುವನ್ನು ನಿರ್ನಾಮಮಾಡಲು ಅನುಕೂಲವಾಯಿತು. ಇನ್ನು ಶತ್ರುಗಳ ವಾಶ ಬಹಳ ಕಾಲವಿಲ್ಲ ಮಿತ್ರರು ಯೂರೋಪಿನಲ್ಲಿ ಎರಡನೇ ರಣರಂಗವನ್ನು ಬೇಗನೆ ತಾಪಿಸಬೇಕು. ಇದರಿಂದ ತಾವು ತಪ್ಪು ನ್ನು ಇದುವರೆಗೆ ಕಾಪಾಡಿದ ರಷ್ಯನಿಗೆ ಕೃತಜ್ಞತೆಯನ್ನು ತೋರಿದಂತಾಗುವುದಿಲ್ಲವೆ ? ರಷ್ಯದರು ಪಶ್ಚಿಮ ಯೂರೋಪಿನಲ್ಲಿ ಎರಡನೇ ರಣರಂಗವನ್ನು ಹೂಡಿ. ತಮಗೆ ಸ್ವಲ್ಪ ವಿಶ್ರಾಂತಿ ಕೊಟ್ಟಂತಾಗುವುದೆಂದು ಪದೇಪದೇ ಕೇಳುತ್ತಿರುವರು ಮಿತ್ರರು ವಿಮಾನಧಾಳಿಯನ್ನು ವಿಶೇಷವಾಗಿ ಮಾಡುತ್ತಿರುವರು. ದೊಡ್ಡ ರಣರಂಗವನ್ನು ಹೂಡಿ ಎಂದು ರಷ್ಯನ್ನ ಬೇಡಿಕೆ ; ಚಿಕ್ಕ ಕದನಗಳಿಂದ ಪ್ರಯೋಜನವಿಲ್ಲವೆನ್ನುವರು.

ರಷ್ಯನರೂ ಮಿತ್ರರೂ ಒಟ್ಟುಗೂಡಿ ಯುದ್ಧವನ್ನು ಹೂಡಲಾಗುವುದಿಲ್ಲ. ಪಶ್ಚಿಮ ಯೂರೋಪಿನಲ್ಲಿ ಬಲವಾದ ಹೆಜ್ಜೆ ಸೇದಿಸಿಂದ ಮಿತ್ರರು ಎಂದು ಕುರುಕ್ಷೇತ್ರವನ್ನು ಮಾಡಿದರೋ ನಾವು ಹೇಳುವಹಾಗಿಲ್ಲ. ರಷ್ಯಾವನ್ನು ಈ ಜೇಸಿಗೆಯಲ್ಲಾಯಾ ಯುದ್ಧಮಾಡಿ ಎನ್ನುವುದೂ ಸರಿಯಾದ್ದಲ್ಲ !

ತುರ್ಕಿಯು ಇಸ್ಮಂಬಾಲಿಗೆ 60 ಮೈಲಿ ಪೂರ್ವದಲ್ಲಿರುವ ಅಡಜಾರ್ ನಗರದಲ್ಲಿ ಭೂಕಂಪವಾಗಿ 15 ಸಾವಿರ ಜನ ಸತ್ತರೆಂದೂ ಅಲ್ಲಿ ವಾಸವಾಗಿದ್ದವರು 24 ಸಾವಿರ ಮೆಂದೂ ಹೇಳಲಾಗಿದೆ.

ನಿನ್ನೇ ದಿವಸ ಬ್ರಿಟನ್ನಿಂದ 700 ಕ್ಕೆ ಮೀರಿದಷ್ಟು ವಿಮಾನಗಳು ಹೊರಟು ಜರ್ಮನಿಯ ಆಗ್ನೇಯದ ಕಡೆಗಳಲ್ಲಿ ಧಾಳಿ ಮಾಡಿದವು. ಮಿತ್ರರ 44 ವಿಮಾನಗಳು ಮಾತ್ರ ಹಿಂತಿರುಗಲಿಲ್ಲ.

ಪೂರ್ಣಾಲಾ ಸರಕಾರದವರು ತನ್ನ ಪ್ರಜೆಗಳು ದವಸಗಳನ್ನು ಕೊಳ್ಳಲು 3 ತಿಂಗಳು ಸಂಬಳವನ್ನು ಮುಂಗಡವಾಗಿ ಕೊಟ್ಟಿರುತ್ತಾರೆ.

ವಿವಿಧ ವಿಷಯ

ಮುಂದೆ ವೈಸರಾಯರಾಗುವ ಫೀಲ್ಡ್ ಮಾರ್ಷಲ್ ವೇವಲರು ಇಂಡಿಯಾಲಫೀಸಿನಲ್ಲಿ ಕೆಲಸ ಮಾಡುತ್ತಿರುವರು.

ಂ ಂ

ನೇಪಲ್ಸ್ ಮತ್ತು ಸಿಸಲಿಯ ಅನೇಕ ಊರುಗಳನ್ನು ಜುಲೈ 10 ರೊಳಗಾಗಿ ಇಟಲಿಯವರು ಖಾಲಿಮಾಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆಯೆಂದು ತುರ್ಕಿಯಿಂದ ತಂತೀವಾರ್ತೆ ಬಂದಿದೆ.

ಂ ಂ

ಜನವರಿ 15 ರಲ್ಲಿ ಡಂಡಂ ರೈಲ್ವೇ ಸ್ಟೇಷನ್ನಿನಲ್ಲಿ ನಡೆದ ರೈಲ್ವೆ ಅನಾಹುತಕ್ಕೆ ಡ್ರೈವರೇ ಹೊಣೆಗಾರನೆಂದು 6 ತಿಂಗ ಕಠಿಣ ಸಜಾ ವಿಧಿಸಲಾಗಿದೆ.

ಂ ಂ

ಈಗ ಯೂರೋಪಿನ ಮೇಲೆ ದಂಡೆಯಾತ್ರೆ ಹೋಗುವ 'ಇಂವೇಷನ್ ಸೇನೆ' ಯವರು ನೀರಿನ ಮೇಲೂ, ಭೂಪ್ರಯು ಮೇಲೂ ಯುದ್ಧಮಾಡುವ ರೀತಿಯಲ್ಲಿ ಅಮೆರಿಕನ್ನರು ತಮ್ಮ ಸೇನೆಗಳನ್ನು ತರಬೇತು ಮಾಡುತ್ತಿರುವರು.

ಂ ಂ

ಜರ್ಮನಿಯ ಸೇನೆಯಲ್ಲಿ ಜನರು ಕಮ್ಮಿಯಾಗುತ್ತಿರುವುದರಿಂದ ಆರ್ಯರಲ್ಲದ ಪೋಲ್ ಕ್ರೋಟ್ಸ್ ಮಂತಾದವರನ್ನು ಹಿಟ್ಲರು ಸೇನೆಗೆ ಸೇರಿಸಿಕೊಳ್ಳುತ್ತಿರುವನು.

ಂ ಂ

ಈಗಿನ ಯುದ್ಧದಿಂದ ಅಮೇರಿಕಾ ಸೇನೆಯಲ್ಲಿ ನಷ್ಟ 89503 ಎಂದೂ ಇವರ ಹತ್ತಿರ ಸಂಬಂಧಿಗಳಿಗೆಲ್ಲಾ ಈ ವಿಷಯ ತಿಳಿಸಲಾಗಿದೆಯೆಂದೂ ಪ್ರಕಟವಾಗಿದೆ. ಇದರಲ್ಲಿ ಸತ್ತವರು 15 ಸಾವಿರ ಗಾಯಗೊಂಡವರು 21 ಸಾವಿರ, ಪತ್ತೆ ಇಲ್ಲದವರು 32 ಸಾವಿರ, ಯುದ್ಧ ಖೈದಿಯಾಗಿರುವವರು 20 ಸಾವಿರ.

ಂ ಂ

ಮಿಡತೆಗಳ ಸಂಗಡ 5 ವರ್ಷ ಕಾಲ ಯುದ್ಧ ಹೂಡಿ ಅವನ್ನು ನಿರ್ಮೂಲ ಮಾಡಲು ಕರಾಚಿ ಸರಕಾರದವರು 7ವರೆ ಲಕ್ಷ ರೂಪಾಯಿ ಮಂಜೂರ್ಮಾಡಿರುವರು. ಭಾರತದಲ್ಲಿ ಮಿಡತೆ ಯುದ್ಧಕ್ಕೆ ದ್ರವ್ಯ ವಿಚರ್ಜು ಮಾಡುವುದು ಇದೇ ಮೊದಲು.

ಂ ಂ

ಸಿಂಧಿನಲ್ಲಿ ಮಿ || ಜಿನ್ನಾರವರು ಒಂದು ಮುಸ್ಲಿಂ ಕಾಲೇಜಿನ ಶಂಕುಸ್ಥಾಪನೆ ಮಾಡಿದರು, ಇದಕ್ಕೆ ಅವರು 5 ಸಾವಿರ ರೂಪಾಯಿ ದಾನಾ ಮಾಡಿದರು, ಇತರರು 62 ಸಾವಿನ ರೂ. ಗಳನ್ನು ಕೊಡಲು ವಾಗ್ದಾನ ಮಾಡಿರುವರು.

ಬೆಲ್ಜಿಯಮ್ಮಿನ ಕೂಲಿಗಾರರೆಲ್ಲಾ ಕಾರ್ಖಾನೆಗಳನ್ನು ಬಿಟ್ಟುಹೋಗಬೇಕೆಂದು ಬ್ರಿಟಿಷರು ಎಚ್ಚರಿಕೆ ಕೊಟ್ಟಿರುವರು. ಆ ಕಾರ್ಖಾನೆಗಳನ್ನೆಲ್ಲಾ ಹಾಳೆ ಮಾಡುವಂತೆ, ಇದೇ ತರಹ ಎಚ್ಚರಿಕೆಯನ್ನು ಫ್ರಾನ್ಸಿನವರಿಗೂ ಇಟಲಿಯವರಿಗೂ ಕೊಟ್ಟಿದ್ದರೂ ಅವರು ಕೇಳಲಿಲ್ಲ, ನಷ್ಟಪಟ್ಟರು.

ಂ ಂ

ಕಳೆದ ಭಾನುವಾರ ಸರ್ ಎಂ. ವಿಶ್ವೇಶ್ವರಯ್ಯನವರ ಬೊಂಬಾಯಿನಲ್ಲಿ ಮಾತನಾಡುತ್ತಾ, ಯುದ್ಧ ಮುಗಿದ ನಂತರ ಭಾರತದಲ್ಲಿ 5 ವರ್ಷ ಕಾಲದಲ್ಲಿ ಎಲ್ಲಾ ಕೈಗಾರಿಕೆಗಳನ್ನೂ ಸ್ಥಾಪಿಸಲು ಒಂದು ಸಾವಿರ ಕೋಟಿ ರೂಪಾಲಧನವು ಬೇಕಾಗುವುದೆಂದು ಹೇಳಿದರು.

ಂ ಂ

ಅಮೇರಿಕಾದ ಡೆಟ್ರಾಯಿಟ್ಟಿನಲ್ಲಿ ಜಾತಿ ಸಂಬಂಧದ ಗಲಭೆಯಾಗಿ ನೀಗ್ರೋ ಜೀವೀಜನರಿಗೆ ಹೊಡೆದಾಟ ನಡೆದು 23 ಮಂದಿ ಸತ್ತರು ಮತ್ತು 700 ಮಂದಿ ಗಾಯಗೊಂಡರು. ಆಲ್ಲಿ ಈಗ ಮಾರ್ಷಲ್ ಲಾ ಜಾರಿಯಲ್ಲಿದೆ 1300 ಮಂದಿ ದಸ್ತಗಿರಿ ಮಾಡಲಟ್ಟಿದ್ದಾರೆ.

ಂ ಂ

ಬರ್ಮಾ ಯುದ್ಧವು ಮುಳಿಯು ಮುಗಿಯುವವರಿಗೂ ಏನೂ ಮಾಡಲಾಗುವುದಿಲ್ಲ. ಅರಕಾನ್ನಲ್ಲಿ ಮಿತ್ರರಿಗೆ ಆದುದು ಅಪಜಯವೆಂದು ಹೇಳಲಾಗುವುದಿಲ್ಲ. ಅರಕಾನ್ ಮುಖಾಂತರ ಬರ್ಮಾ ಮೇಲೆ ನುಗ್ಗಲು ಆಗುವುದಿಲ್ಲ. ಅಲ್ಲಿ ಬೆಟ್ಟ ಗುಡ್ಡ ಕಾಡು ಕೊಜ್ಜೆ ಇವುಗಳಿಂದ ತುಂಬಿಹೋಗಿದೆ. ಬರ್ಮಾಕ್ಕೆ ರಂಗೂನ್ ಮುಖ್ಯ. ಆದ್ದರಿಂದ ಸಮುದ್ರದಿಂದಲೇ ಶತ್ರುವನ್ನು ನಾಶಮಾಡಬೇಕು. ಆಸ್ಸಾಂನಿಂದ ಬರ್ಮಾ ಮೇಲೆ ನುಗ್ಗಲು ಸೇತುವೆ ರಸ್ತೆ ಇವುಗಳನ್ನು ತಯಾರಿಮಾಡಬೇಕಾಗಿದೆ.

ಂ ಂ

ಜಿಬ್ರಾಲ್ಟರಿನಿಂದ ಮತ್ತೆ ಅನೇಕ ನೌಕೆಗಳು ಉತ್ತರ ಆಫ್ರಿಕಾಕ್ಕೆ ಹೊರಟವೆಂದೂ ಅವೆಲ್ಲಾ ಆಲ್ಜೀರಿಯಾ ಕೊಲ್ಲಿಯಲ್ಲಿ ತಂಗಿರುವವೆಂದೂ ಜರ್ಮನರು ಹೇಳುತ್ತಿರುವರು,

ಂ ಂ

ಜರ್ಮನರು ರಷ್ಯಾದವರ ಮೇಲೆ ಯುದ್ಧಹೂಡಿ ಮೊನ್ನೆ ಸೋಮವಾರಕ್ಕೆ ಎರಡು ವರ್ಷ ತುಂಬಿ ಮೂರನೇ ವರ್ಷ ನಡೆಯುತ್ತಿದೆ. ಈ ಎರಡು ವರ್ಷಗಳಲ್ಲಿ ಜರ್ಮನರಿಗೆ 64 ಲಕ್ಷ ಸೇನೆ ನಷ್ಟವಾಗಿದೆಯೆಂದೂ ರಷ್ಯಾದವರಿಗೆ 42 ಲಕ್ಷ ಮಾತ್ರವೆಂದೂ ಹೇಳಲಾಗಿದೆ.

ವೆಲೂಕೀ ಸಮೀಪದಲ್ಲಿ ರಷ್ಯಾ ಜರ್ಮನಿಗಳಿಗೆ ಘೋರವಾದ ಯುದ್ಧವು ನಡೆಯುತ್ತಿರುವುದು.

ಂ ಂ

ಈಗಿನ ವಿರ್ಸಾಡಿನಂತೆ ಜನರಲ್ ಜೀರೋರವರು ಉತ್ತರ ಮತ್ತು ಪಶ್ಚಿಮ ಆಫ್ರಿಕಾ ಬಡಳಿತವನ್ನು ನೋಡಿಕೊಳ್ಳುವರೆಂದೂ, ಇತರ ಫ್ರೆಂಚ್ ಸ್ವಾತಂತ್ರ್ಯದ ಬಡಳಿತವನ್ನು ಜನರಲ್ ಡಿಗಾಲರು ನೋಡಿಕೊಳ್ಳುವರೆಂದೂ ನಿರ್ಧಾರವಾಗಿದೆ

ಂ ಂ

ಆಸ್ಟ್ರೇಲಿಯಾ ಸರ್ಕಾರದಲ್ಲಿ ಈಗಿರುವ ಮಂತ್ರಿ ಮಿ || ಕರ್ಟಿನ್ನರಲ್ಲಿ ಅವಿಶ್ವಾಸವನ್ನು ಸೂಚಿಸುವ ಠರಾವನ್ನು ಎದುರು ಪಾರ್ಟಿಯವರು ತಂದು ಒಂದು ವೋಟಿನಿಂದ ಪರಾಜಿತರಾದರು.

ಂ ಂ

ಚೀಣಾದಲ್ಲಿ ಯಾಂಗಟೀಸ್ ನದಿಯ ತೀರದಲ್ಲಿ ಈಗ ಜಪಾನಿಯರ ಕೈಯಲ್ಲಿರುವ ಪಿಷಾ ನಗರವನ್ನು ಚೀಣೀಯರು ಮುತ್ತಿರುವರು

ಂ ಂ

ಕೈರೋದಲ್ಲಿನ ಭೌತಿಕ ಶಾಸ್ತ್ರಜ್ಞರು ಪೂರ್ವ ಸಹಾರಾ ವಲಯಗಳಿಗೆ ಬಂಗಾಳ ಮತ್ತು ಕ್ರೋಮುಗಳು ಅಪಾರವಾಗಿ ದೊರೆಯುವ ಗಣಿಗಳನ್ನು ಬೆಳಕೆಯನ್ನು ತಮ್ಮ ಪರಿಶೋಧನೆಗಳಿಂದ ಕಂಡು ಹಿಡಿದಿರುವರು. ಪ್ರಪಂಚದಲ್ಲಿ ಲಭಿಸುವ ಕ್ರೋಮಿನಲ್ಲಿ ಶೇಕಡಾ 57 ರಷ್ಟು ಆಲ್ಲಿ ಲಭಿಸುವದಂತೆ

ಂ ಂ

ಅಮೇರಿಕಾದಲ್ಲಿ ಮಿಲಿಟರಿಯವರ ವಯಸ್ಸನ್ನು 65 ಕ್ಕೆ ಏರಿಸುವುದಾಗಿ ಮಿ || ರೂಸ್‌ವೆಲ್ಟರು ಹೇಳಿರುವರು.

ಂ ಂ

ಏರ್ಲೆಂಡಿನಲ್ಲಿ ಚುನಾವಣೆ ನಡೆಯುತ್ತಿರುವುದು. ಈಗಾದ ಓಟಿನ ಎಣಿಕೆಯಲ್ಲಿ ಮಿ ಡಿವಿಲೆರವರಿಗೆ ಹೆಚ್ಚು ವೋಟು ಒಂದಿದೆ ಇನ್ನೂ ಎಣಿಕೆ ನಡೆಯುತ್ತಲೇ ಇದೆ.

ಂ ಂ

ಈಗ 3 ದಿವಸದ ಕೆಳಗೆ ಮಿತ್ರರು ಇಟಲಿಯಲ್ಲಿರುವ ಸಲೋನಾ ಮೇಲೆ ಧಾಳಿ ಮಾಡಿದ್ದರಷ್ಟೆ. ಆಗ ಉಂಟಾದ ಅಗ್ನಿಜ್ವಾಲೆಯು ಇನ್ನೂ ಉರಿಯುತ್ತಲೇ ಇರುವುದಂತೆ !

ಂ ಂ

ಸ್ವೀಡನ್ನಿನ ಮೂಲಕ ಜರ್ಮನಿಯ ಟ್ರಾಫಿಕ್ಕು ವಿಶೇಷವಾಗಿ ತಗ್ಗಿಹೋಗಿರುವುದೆಂದೂ ಇನ್ನು ಕೆಲವು ದಿನಗಳಲ್ಲಿ ಆ ಅಲ್ಪವೂ ಪೂರ್ಣವಾಗಿ ನಿಂತುಹೋಗುವುದೆಂದೂ ಸ್ವೀಡಿಷ್ ವಾರ್ತೆಯು ತಿಳಿಸುತ್ತದೆ.

ತಯಾರಿಕೆ ಕಮ್ಮಿಯಾಯಿತು

ಮೇ ತಿಂಗಳಲ್ಲಿ ತಯಾರಾದ ಯುದ್ಧೋಪಯೋಗಿ ಸಾಮಗ್ರಿಗಳು ಏಪ್ರಿಲ್‌ಗಿಂತ ಶೇಕಡ ಐವತ್ತರಷ್ಟು ಕಮ್ಮಿಯಾಗಿದೆಯೆಂದು ಅಮೇರಿಕಾ ಸರಕಾರದ ಹೇಳಿಕೆ. ವಿಮಾನ ತಯಾರಿಕೆ ಮಾತ್ರ ಜೆನ್ನಾಗಿದೆಯಂತೆ ಮಿಕ್ಕಿರಿಗೆ ಟನ್ನಿಷಿಯಾ ಮತ್ತಿತರ ಭಾಗಗಳಲ್ಲಿ ಜಯಸ್ಪದದ ಖುಷಿಯೇ ಇದಕ್ಕೆ ಕಾರಣ.

ಂ ಂ

ಬಟ್ಟೇ ಗೋಳು ತಪ್ಪೀತೆ ?

ಅನೇಕರು ಒಟ್ಟೇಧಾರಣೆ ಇನ್ನೇನು ಕಮ್ಮಿಯಾಗುವುದೆಂದು ಚಾತಕಪಕ್ಷಿಯಂತೆ ಕಾದಿರುವರು. ಈಗ ಭಾರತದಲ್ಲಿರುವ ಸರಕು 400 ರಿಂದ 1000 ಮಿಲಿಯನ್ ಯಜಮಾನರು ಹೇಳುವರು. ಒಟ್ಟೇ ಧಾರಣೆ ಇಳಿಯುವುದೆಂದು ಮಿಲ್ ಯಜಮಾನರು ಹೇಳುವರು.

ಂ ಂ

ಹೆಸ್ರಿ ಕೇಜರರ ಯುಕ್ತಿ

ಈಗ ಅಮೇರಿಕಾದಲ್ಲಿ ಪ್ರತಿ ದಿವಸವೂ 45 ನೌಕೆಗಳನ್ನು ತಯಾರ್ಮಾಡುತ್ತಿರುವ ಹೆಸ್ರಿ ಕೇಜರರು ಯುದ್ಧ ಮುಗಿದ ಮೇಲೆ ತನಗೆ ಈಗಿನಂತೆ ಕೆಲಸ ಸಿಕ್ಕಲಾರದೆಂದು ತನ್ನ ಕೆಲಸಗಾರರಿಗೆ ಮುಂದೆ ಕೆಲಸ ಕೊಡಲು ಒಂದು ಉಪಾಯವನ್ನು ಕಂಡುಹಿಡಿದಿದ್ದಾನೆ. ಪೂರ್ತಿ ಮನೆಯನ್ನು ಬೇರೆಬೇರೆ ಭಾಗವಾಗಿ ತಯಾರ್ಮಾಡುವುದು, ಇದನ್ನು ರೈಲಿನಲ್ಲಾಗಲೀ ವಿಮಾನದಲ್ಲಾಗಲೀ ಗಾಡಿಗಳಲ್ಲಾಗಲೀ ಸುಲಭವಾಗಿ ಸಾಗಿಸುವಂತೆ ಮಾಡುವನಂತೆ. ಅದರಿಂದ 1—2 ಗಂಟೆಗಳಲ್ಲಿ ಎಲ್ಲಿಬೇಕಾದರೂ ಮನೆಯನ್ನು ನಿರ್ಮಿಸಬಹುದಂತೆ. ನದ್ರ ತೀರದಲ್ಲಿ ವಾಸಿಸಲು ಅನುಕೂಲವಾಯಿತು. ಖಾಯಿಲೆಯವರು ಉತ್ತರವಾದ ಸ್ಥಳಗಳಲ್ಲಿ ಮನೆಕಟ್ಟಿಕೊಳ್ಳಬಹುದು, ಜಮೀನ್ದಾರರು ಸುಗ್ಗಿಕಾಲದಲ್ಲಿ ತಮ್ಮ ಜಮೀನುಗಳಲ್ಲಿ ಕಟ್ಟಿಕೊಳ್ಳಬಹುದು. ಬೆಲೆಯೂ ಸ್ವಲ್ಪವಂತೆ

ಈಚೆಗೆ ಜರ್ಮನಿಗೂ ಜಪಾನಿಗೂ ಕೆಲವು ವಿಷಯಗಳಲ್ಲಿ ಮನಸ್ತಾಪವಾಗಿರುವುದೆಂದು ಹೇಳಲಾಗಿದೆ.

ಬ್ರಿಟಿಷ್ ನೂತನ ವಿಮಾನ

ಬ್ರಿಟಿಷರು ಈಗ ಒಂದು ಹೊಸ ತರಹ ವಿಮಾನವನ್ನು ತಯಾರಿಸಿದರು. ಇದರ ಹೆಸರು ಬ್ರಿಸಲ್‌ಬ್ಲೆನೆಂ. ಪಂಚದಲ್ಲಿ ಇದಕ್ಕಿಂತ ಉತ್ತಮವಾದ ವಿಮಾನ ಒಂದಿಲ್ಲ. ಇದು ಗಂಟೆಗೆ 330 ಮೈಲಿಯಂತೆ ಹಾರಬಲ್ಲದು; ಆದೂ 14 ಸಾವಿರ ಅಡಿ ಎತ್ತರದಲ್ಲಿ. ಒಂದುಸಲ ಎಣ್ಣೆಯನ್ನು ತುಂಬಿಕೊಂಡ 1500 ಮೈಲಿ ಹಾರಲ್ಲದು. ಈಗ ಇದನ್ನು ಜರ್ಮನಿ ಕಡೆಯಲ್ಲಿ ಬಿಡುತ್ತಿರುವರು. ಇದೇ ಲಿಬಿಯ, ಇಂಗ್ಲೆಂಡಿನಲ್ಲಿ ಕೆಲಸವಾಡಿ ಖ್ಯಾತಿಗೆ ಬಂದಿದೆ.

ಂ ಂ

ಸಿನಿಮಾ ನಟಿಗಳ ಸಂಪಾದನೆ.

ಕೆ. ಬಿ. ಸುಂದರಂಬಾಳ್‌ರವರಿಗೆ ಇದುವರಿಗೆ ಹೆಚ್ಚಾಗಿ ಹಣ ಸಂದಾಯವಾಗಿದೆ. ಎಂ. ಎಸ್. ಸುಬ್ಬಲಕ್ಷ್ಮಿಯವರಿಗೆ ಪ್ರತಿಯೊಂದಕ್ಕೂ ಎಲ್ಲರಿಗಿಂತಲೂ ಹೆಚ್ಚಾಗಿ ಹಣ ಕೊಟ್ಟಹೊರ್ತು ಪಾತ್ರ ವಹಿಸುವುದಿಲ್ಲ. ಎಂ. ಕೆ. ಟಿ ಕನ್ನಂಬಾಯವರಿಗೆ ಪ್ರತಿಯೊಂದು ಪಿಕ್ಚರ್‌ಗೂ 30 ಸಾವಿರ ರೂಪಾಯಿ ಕೊಡಬೇಕು. ಎಂ ಕೆ. ಟಿ ಭಾಗವತರ್, ಪಿ. ವಿ. ಚಿನ್ನಸ್ವಾ. ಟಿ. ಆರ್. ರಾಜಕುಮಾರಿ, ಕೆ ಎಲ್. ವಿ. ವಸಂತ, ಪುಷ್ಪವಲ್ಲಿ, ಕೃಷ್ಣನ್, ಮಧುರಂ ಇವರೆಲ್ಲರೂ ಹೆಚ್ಚಾಗಿ ಹಣ ಕೊಡದ ಹೊರ್ತು ಪಾರ್ಟು ಮಾಡುವವರಲ್ಲ.

ಂ ಂ

ಜಿಬ್ರಾಲ್ಟರಿನಲ್ಲಿ

ಈಗ ಜಿಬ್ರಾಲ್ಟರಿನಲ್ಲಿ ಮಿತ್ರರ 74 ನೌಕೆಗಳೂ, 1 ಯುದ್ಧ ಹಡಗು, 2 ಏರ್ ಕ್ರಾಫ್ಟ್ ಕ್ಯಾರಿಯರ್, 10 ಡಿಸ್ಟ್ರಾಯರ್ ಇರುವುದೆಂದೂ, ಅಮೇರಿಕಾದಿಂದ 8 ಸಾಮಾನ್ಯ ಹಡಗುಗಳೂ, 3 ಡಿಸ್ಟ್ರಾಯರುಗಳೂ ಒಂದಿರುವುದೆಂದೂ ಗೊತ್ತಾಗಿದೆ.

ಂ ಂ

ಮ್ಯಾಜಿಸ್ಟ್ರೇಟರ ದಸ್ತಗಿರಿ

ಜೂನ್ 11 ರಲ್ಲಿ ಪಾಟ್ನಾದ ಸಬ್ ಮ್ಯಾಜಿಸ್ಟ್ರೇಟರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅವರು ತಮ್ಮ ಹೆಂಡತಿಯೆನ್ನು ನೂಕಿದರೆಂದೂ, ಆಕೆಯು ನದಿಯಲ್ಲಿ ಬಿದ್ದು ಮುಳುಗುತ್ತಿದ್ದಾಗ ಯಾರೋ ಪುಣ್ಯಾತ್ಮರು ಆಕೆಯನ್ನು ಒದುಕಿಸಿದರೆಂದೂ, ಆಗಿನಿಂದ ಮ್ಯಾಜಿಸ್ಟ್ರೇಟರು ತಲೆತಪ್ಪಿಸಿಕೊಂಡಿದ್ದರೆಂದೂ, ಈಗ ಇವರು ಸಿಕ್ಕಿ ಪೀನಲ್ ಕೋಡು 307 ರ ಪ್ರಕಾರ ಪೋಲೀಸರ ವಶವಲ್ಲಿದ್ದಾರೆಂದೂ ತಿಳಿಯಬಂದಿದೆ.

ಸೀಮೆಎಣ್ಣೆ ಅಭಾವವೇ ಇಲ್ಲ.

ಅಮೆರಿಕಾ ಡ್ಯೂಪೌಂಟ್‌ಗಳ್ಳಿರನ ಮಾರ್ಟಿಡೆಸಿಂಗ್ ಕಂಪನಿಯವರ ಒಂದು ತರಹ ಬಣ್ಣವನ್ನು (ಪೇಂಟ್) ತಯಾರು ಮಾಡಿರುವರು ಈ ಬಣ್ಣವನ್ನು ಮನೆಯಲ್ಲಿ ಗೋಡೆಯಮೇಲೆ ಒಳಿದರೆ ರಾತ್ರಿ ಕಾಲದಲ್ಲಿ ಇದು ಫಳಫಳಿಸುವುದು. ಬೆಳಕನ್ನು ಕಾರುವುದು. ದ್ವೀಪವನ್ನು ಹತ್ತಿ ಸುವ ಕೆಲಸ ತಪ್ಪಿತು. ಸೀಮೆಎಣ್ಣೆಯನ್ನು ಕೊಳ್ಳುವ ಭಾರ ತಪ್ಪಿತು.

ಂ ಂ

ಹೆಂಡತಿಯ ಖರೀದಿ

ಪಶ್ಚಿಮ ಆಫ್ರಿಕಾದ ಲಿಬ್ಬಿಯಾದಲ್ಲಿ ಒಬ್ಬಹೆಂಡತಿಯ ಕ್ರಯವು 15 ಪೌಂಡು

ಂ ಂ

ಜಿನ್ನಾರವರ ಮುಂಬಯಿ ಆಸ್ತಿ.

ಈಗ ಕೆಲವು ದಿವಸಗಳ ಕೆಳಗೆ ಮಿ|| ಜಿನ್ನಾರವರು ತಮ್ಮ ಮುಂಬಯಿ ಆಸ್ತಿಯನ್ನು ಮಾರಿ ತಮ್ಮ ಪಾಕಿಸ್ತಾನ್ ರಾಜಧಾನಿಯಾದ ಲಾಹೋರಿನಲ್ಲಿ ನೆಲೆಯಾಗಿ ನಿಲ್ಲಲು ಅಲ್ಲಿ ಆಸ್ತಿಪಾಸ್ತಿಗಳನ್ನು ಮಾಡಿಕೊಳ್ಳುವಹೆಂದು ಬರೆದಿದ್ದುದನ್ನು ನಳ್ಳೆಂದು ಮಿ|| ಜಿನ್ನಾರವರು ಪ್ರಕಟಿಸಿದ್ದರು. ಈಗ ಮಿ|| ಜಿನ್ನಾರವರು ತಮ್ಮ ಮುಂಬಯಿ ಆಸ್ತಿಯನ್ನು ಮಾರುವವರಾಗಿರುವರು. ಮನೆ ವಗೈರೆಯನ್ನು ಲಾಹೋರಿನಲ್ಲಿ ಮಾಡುವರು. ತಮ್ಮ ಬಳಿಯಲ್ಲಿರುವ ಯೂರೋಪಿಯರ್ ದರ್ಜಿಯವರು ಹೊಲೆದ 1003 ಸೂಟ್‌ಗಳನ್ನು ಮುಸಲ್ಮಾನ್ ಪರವಾನಿ ಮತ್ತು ಪಾಜಾಮಿಗೂ ಬವಲಾಯಿಸುತ್ತಾರೋ ?

ಂ ಂ

ಹೊಸ ವೈಸರಾಯರು

ಫೀಲ್ಡ್ ಮಾರ್ಷಲ್ ವೇವಲರನ್ನು ಮುಂದಿನ ವೈಸರಾಯಿ ಪದವಿಗೆ ನೇಮಿಸಿದ್ದರಿಂದ " ಭಾರತ ಸರಕಾರವು ಈಗ ಮಾರ್ಷಲ್ ಲಾ ದಂತಿರುವ ಆರ್ಡನೆನ್ಸುಗಳಿಂದ ನಡೆಯುತ್ತಿದೆ. ಇದೇ ರೀತಿಯಲ್ಲಿ ಸರಕಾರವು ನಡೆಯುವುದೇ ಕಾದು ಮಿಲಿಟರಿ ಅಧಿಕಾರದಲ್ಲಿರುವುದೇ ಒಳ್ಳೇದು " ಎಂದು ಒಂಗಾಳಾ ಕಾಂಗ್ರೆಸ್ ಪಾರ್ಲಿಮೆಂಟರಿ ಸದಸ್ಯರಾದ ಶ್ರೀ ಕಿರಣ್ ಶಂಕರ ರಾಯ್ ರವರು ಹೇಳಿರುವರು.

ಕುರ್ಸ್ಕ್ ರಣಕ್ಷೇತ್ರದಲ್ಲಿ ರಷ್ಯನರು ಹೇರಳವಾಗಿ ಸೇನೆಗಳನ್ನು ಶೇಖರಿಸುತ್ತಿರುವರು. ಬೇಸಿಗೆಯಲ್ಲಿ ರಷ್ಯನರು ತಾವೇ ಜರ್ಮನರ ಮೇಲೆ ಬೀಳುವಂತಿದೆ. ನಾಜಿಗಳ ವಿಮಾನ ನಿಲ್ದಾಣಗಳು ಅನೇಕ ಕಡೆ ಆಗ್ನಿಗೆ ಆಹುತಿಯಾಗಿದೆ. ಹಿಟ್ಲರು ಮುಂದೆ ನುಗ್ಗದಂತೆ ರಷ್ಯನರು ಏರ್ಪಾಡನ್ನು ಮಾಡುತ್ತಿದ್ದಾರೆ.

ವಾರ್ತಾತರಂಗ

ಈಗ ಮಿತ್ರರಲ್ಲಿ 13—14 ಮಿಲಿಯ ಸೇನೆ ಇರುವುದು. ಇದರಿಂದ ಯೂರೋಪು ಮುತ್ತುವುದು ಸಾಧ್ಯವೆಂದು ರಷ್ಯರ ಆಸೆ. ಬ್ರೀಷರು ಈಗ 2—3 ಮಿಲಿಯ ಸೇನೆಯನ್ನು ಸುಲಭವಾಗಿ ರಣರಂಗಕ್ಕೆ ಬಿಡಬಹುದು ಈಗ ಮಾತ್ರ ತಿಂಗಳಿಗೆ 6000 ಟ್ಯಾಂಕ್, 10 ಸಾವಿರ ಗುಂಡು, 10—11 ಸಾವಿರ ವಿಮಾನ ತಯಾರಾಗುತ್ತಿವೆ. ಜರ್ಮನಿಯು ತಿಂಗಳಿಗೆ 3—4 ಸಾವಿರ ಗುಂಡು, 4 ಸಾವಿರ ವಿಮಾನಗಳನ್ನು ಮಾತ್ರ ತಯಾರಿಸುವುದು. ಈಗ ಬ್ರಿಟಿಷ್ ಮತ್ತು ಅಮೇರಿಕಾ ತಮ್ಮ ಶತ್ರುಗಳಿಗಿಂತ ಎರಡರಷ್ಟಕ್ಕಿಂತ ಹೆಚ್ಚಾಗಿ ಇಟ್ಟುಕೊಂಡಿರುವುವೆಂದು ರಷ್ಯನ್ ಪತ್ರಿಕೆಗಳ ಅಭಿಪ್ರಾಯ.

ಂ ಂ

ಇಟಲಿಗೂ ಜರ್ಮನಿಗೂ ಮಧ್ಯೆ ಇರುವ ಬ್ರೆನ್ನರ್ ಕಣಿವೆ ಮಾರ್ಗವನ್ನು ಜರ್ಮನರು ಪ್ರಯಾಣಕ್ಕೆ ಬಂದು ನೂಡಿರುವರು,

ಂ ಂ

ರಷ್ಯಾರಣಕ್ಷೇತ್ರದಲ್ಲಿ ಕಳೆದ ವಾರ ಜರ್ಮನರ 276 ವಿಮಾನಗಳು ನಷ್ಟವಾದವು, ರಷ್ಯಾದವರ ನಷ್ಟ 94 ಮಾತ್ರ.

ಂ ಂ

ತುರ್ಕಿಯು ದಕ್ಷಿಣ ಭಾಗದಲ್ಲಿ ಬ್ರಿಟಿಷ್ ಸೇನೆಯು ವಿಶೇಷವಾಗಿ ಶೇಖರಣೆಯಾಗಿದೆಯೆಂದು ಟೋಂನಿಂದ ವರ್ತಮಾನ ಬಂದಿದೆ.

ಂ ಂ

ಗ್ರೀಸ್ ರಾಜ್ಯವನ್ನು ಮಿತ್ರರು ಮುತ್ತುವರೆಂದು ನಾಜಿಗಳು ಭಯಗ್ರಸ್ತರಾಗಿರುವರು.

ಂ ಂ

ಈ ವರ್ಷ ಯುದ್ಧಕ್ಕೆ ಅಮೇರಿಕಾ ಸರಕಾರವು 71510 ಮಿಲಿಯ ಡಾಲರುಗಳನ್ನು ವ್ಯಯ ಮಾಡುವುದು. ಇದುವರೆಗೆ ಇಷ್ಟು ಹಣವನ್ನು ಯಾರೂ ಖರ್ಚು ಮಾಡಿರುವುದಿಲ್ಲ.

ಂ ವ.

ಯಾರೇ ಆಗಲಿ ಸ್ವೀಡ್ ದೇಶವನ್ನು ಮುತ್ತಿದರೆ ಅವರನ್ನು ಎದುರಿಸಲು ಸ್ವೀಡನ್ನಿನ ಸರಕಾರವು ಸಿದ್ಧವಾಗಿರುವುದೆಂದು ಹೇಳಲಾಗಿದೆ.

ಲೀಸ್ ಎಂಡ್ ಲೆಂಡ್ ಬಿಲ್ ಪ್ರಕಾರ ಅಮೇರಿಕಾದವರು ತಾವು ಇತರ ದೇಶಗಳಿಗೆ ಎರವು ಕೊಟ್ಟ ಪದಾರ್ಥಗಳಲ್ಲಿ ರಷ್ಯಾಕ್ಕೆ ನಾಲ್ಕರಲ್ಲಿ ಒಂದು ಭಾಗ ಸೇರಿದೆ. ಅಂದರೆ 197 ಪರೆ ಮಿಲಿಯ ಪೌಂಡು ಬಾಳುವಷ್ಟು. ಇದನ್ನು 18 ತಿಂಗಳ ಅವಧಿಯಲ್ಲಿ ಕಳಿಸಿರುತ್ತಾರೆ. ಇದನ್ನು ನೋಡಿದರೆ ಅಮೇರಿಕಾದವರು ರಷ್ಯಾದ ವಿಷಯದಲ್ಲಿ ಎಷ್ಟು ಪ್ರೇಮವುಳ್ಳವರಾಗಿರುವರೆಂದು ಗೊತ್ತಾಗುವುದ.

ಂ ಂ

ಹಿಟ್ಲರ್ ರಷ್ಯಾ ದಂಡಯಾತ್ರೆಗೆ ಹೊರಟಾಗ 20 ಲಕ್ಷ ಸೇನೆಸನೇತ ಹೊರಟನು. ಈಗ ರಷ್ಯಾದಲ್ಲಿ ಇವನ ಸೇನೆ 2 ಲಕ್ಷಕ್ಕೆ ಕಮ್ಮಿಯಿಡೆಯಂತೆ.

ಂ ಂ

ಭಾರತ ವೈಸರಾಯಿ ಪದವಿ ಫೀಲ್ಡ್ ಮಾರ್ಷಲ್ ವೇವಲ್‌ರವರಿಗೆ ಅದದ್ದಕ್ಕಾಗಿ ಲಂಡನ್, ವಾಷಿಂಗ್‌ಟನ್ ಪತ್ರಿಕೆಗಳು ಇವರೇ ಸರಿಯಾದವರು ಎಂದು ಹೊಗಳಿ ಬರೆದಿವೆ.

ಂ ಂ

ಇಟಲಿ ದಕ್ಷಿಣಭಾಗದಲ್ಲಿ ಮಾರ್ಷಲ್ ಲಾ ಜಾರಿಗೆ ಬಂದಿದೆ.

ಂ ಂ

ಮದರಾಸ್ ಪಟ್ಟಣದಲ್ಲಿ ಆಂಗ್ಲೇಯರ ಹೋಟಲಿನಲ್ಲಿ ಅಕ್ಕಿ ಅಥವಾ ಅಕ್ಕಿ ಹಿಟ್ಟಿನ ಆಹಾರ ಪದಾರ್ಥಗಳನ್ನು ಉಪಯೋಗಿಸಬಾರದೆಂದು ಸರ್ಕಾರಿ ಆಜ್ಞೆಯಾಗಿದೆ.

ಂ ಂ

ಐಸಲೆಂಡಿನಲ್ಲಿದ್ದ ಅಮೇರಿಕ್ ಸೈನ್ಯವನ್ನು ಇನ್ನೆಲ್ಲಿಗೋ ವರ್ಗವಾಡಿ ಬ್ರಿಟಿಷ್‌ನಲ್ಲಿ ಹೋ ಮಾಸ್ಟರ್ ರಾಗಿದ್ದವರನ್ನು ನೇಮಿಸಿರುವರು.

ಂ ಂ

ಮೇ ತಿಂಗಳಲ್ಲಿ ಅಮೇರಿಕಾದವರು 7200 ವಿಮಾನಗಳನ್ನು ತಯಾರಾಡಿರುವರು.

ಂ ಂ

ಹೋದ ತಿಂಗಳಲ್ಲಿ ಅಟ್ಲಾಂಟಿಕ್ ಸಾಗರದಲ್ಲಿ ಜರ್ಮನ್ ಸಬ್‌ಮೆರಿನಿಗೂ ಮಿತ್ರರ ನೌಕೆಗಳಿಗೂ 5 ದಿವಸ ಒಳಾವಾದ ಕದನ ನಡೆಯಿತು. ಶತ್ರುಗಳ 5 ಸಬ್‌ಮೆರೀನ್ ಮುಳುಗಿತು, ಮತ್ತು ಕೆಲವಕ್ಕೆ ತುಂಬ ಜಖಂ ಆಯಿತು. ಮಿತ್ರರ ಕಾನ್‌ವಾಯಿನಲ್ಲಿದ್ದ ಹಡಗುಗಳಲ್ಲಿ ಕೇವಲ 97 ರಂತೆ ದಡವನ್ನು ಸೇರಿದವು.

ಂ ಂ

ಅಮೇರಿಕಾದಲ್ಲಿ ಈ ವರ್ಷ ಅಂತ್ಯದಲ್ಲಿ 65 ಲಕ್ಷ ಜನರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವರು.

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುನಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಆಕ್ಸೀಕರಣವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಮೂರ್ತಿಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು

T G. ಮಾರ್ಕಿನ ಹಿಂಗನ್ನು
ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ಸಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Opera — Aryamala — 7th Week

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ ಕೃಷ್ಣ, ಮಸ್ತಾನ್ ಮುಂತಾದವರು ಪಾತ್ರವಹಿಸಿರುವರು

ಅಪೆರಾ ಟಾಕೀಸ್
ಆರ್ಯಮಾಲಾ ೭ನೇವಾರ

Ranjit Talkies
Krishna Sudhama
24—6—43 ರಿಂದ

ಅಚ್ಚುಮೆಚ್ಚಿನ ನಟನಟಿಯರು ಪಾತ್ರವಹಿಸಿರುವ ಮತ್ತು ಸಕಲರೂ ನೋಡತಕ್ಕ ಮಹೋನ್ನತ ಪೌರಾಣಿಕಚಿತ್ರ (ಕನ್ನಡ)

ಕೃಷ್ಣಸುಧಾಮ

ರಣಜಿತ್ ಟಾಕೀಸಿನಲ್ಲಿ
ಪ್ರತಿದಿನ 3 ಆಟಗಳು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಅರಿಷ್ಟಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ.